**ಹೆಚ್ಚುವರಿ ಸಿವಿಲ್ ಮತ್ತು ಜೆಎಮ್ಎಫ್ ಸಿ ನ್ಯಾಯಾಧೀಶರ ನ್ಯಾಯಾಲಯ, ಯಾದಗಿರಿ.**

**ಸಿ.ಸಿ ನಂಃ 16 / 2017**

| | | |
|---|---|---|
| ಸಾಕ್ಷಿಯ ಹೆಸರಃ | ಕರಿಯಪ್ಪ | ಪ್ರಾ.ಸಾಃ 01 |
| ತಂದೆ/ಗಂಡನ ಹೆಸರುಃ | ಭರಮಣ್ಣ | ಚಾಸಾಃ 05 |
| ವಯಸ್ಸುಃ | 50 ವರ್ಷ | ದಿಃ 03.12.2018 |
| ಉದ್ಯೋಗಃ | ಕೂಲಿ | ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. |
| ವಾಸ ಸ್ಥಳಃ | ನೀಲಳ್ಳಿ | |

**ಮುಖ್ಯ ವಿಚಾರಣೆಃ** ಮಾನ್ಯ ಹಿ.ಸ.ಸ.ಅ.ರಿಂದಃ

ನನಗೆ ಚಾಸಾ-4 ರವರ ಪರಿಚಯ ಇರುವುದಿಲ್ಲ. ಯಾವ ದಿನಾಂಕದಂದು ನನ್ನ ಸಮಕ್ಷಮ ಏನು ಮಾಡಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಈಗ ನಾನು ನೋಡುತ್ತಿರುವ ದಾಖಲೆಗೆ ನನ್ನ ಹೆಬ್ಬೆಟ್ಟಿನ ಗುರುತು ಇರುವ ಬಗ್ಗೆ ನನಗೆ ಗೊತ್ತಾಗುವುದಿಲ್ಲ.

( ಈ ಹಂತದಲ್ಲಿ ಮಾನ್ಯ ಸ.ಅ.ಅ. ರವರು ಸಾಕ್ಷಿ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು.)

**ಪಾಟೀ ಸವಾಲು ಮಾನ್ಯ ಹಿ.ಸ.ಸ.ಅ. ರವರಿಂದಃ**

ದಿಃ 28.03.2016 ರಂದು ಮದ್ಯಾಹ್ನ 1-30 ರಿಂದ 2-00 ಗಂಟೆಯ ವರೆಗೆ ನನ್ನ ಮತ್ತು ಚಾಸಾ-4 ರವರ ಸಮಕ್ಷಮ 1 ಮತ್ತು 3 ನೇ ಆರೋಪಿತರು ಕಳುವು ಮಾಡಿದ ವಸ್ತುಗಳಾದ 01. ತಿಳಿ ಆಕಾಶ ಬಣ್ಣದ ಅಲವೈನ್ ಕಂಪನಿಯ ಫ್ರಿಜ್ 02. ಲೈಟ್ಟಿ ಗ್ರೇ ಕಲರ ಕಬ್ಬಿಣದ ಅಲಮಾರಿ, 03. ಎರಡು ಕಂಪುಬಣ್ಣದ 2 ಹೆಚ್.ಪಿ. ಕಂಪನಿಯ ಗ್ಯಾಸ ಸಿಲೆಂಡರಗಳು, 04. ಒಂದು ಸ್ಟೀಲ್ ಬಜಾಜ್ ವಾಟರ ಕಂಟೇನರ್, 05. ಚಾರ್ಮಿನಾರ್ ಎಸ್ 444 ಬರೆದಿರುವ 12 ಬ್ರೆಶ್‌ಗಳು, 06. ಎವರಡಿ ಕಂಪನಿಯ 10 ಪೆನ್ಸಿಲ್ ಸೆಲ್ಗಳು, 07. ಡ್ಯೂರೆಲೆಕ್ಸ ಅಂತ ಬರೆದಿರುವ 06 ವಾರ್ನಿಸ್ ಡಬ್ಬಿಗಳು, 08. ಶ್ರೀ ವಿಜಯ ಅಂತ ಬರೆದಿರುವ 50 ಎಂ.ಎಲ್ ನ 10 ವಾರ್ನಿಸ್ ಡಬ್ಬಿಗಳು, 09. ಯಾರ್ಡ್‌ಸಂ ಅಂತ ಬರೆದಿರುವ ಬಿಳಿ ಬಣ್ಣದ 22 ಪ್ಲೆಗ್ಗುಗಳು. 10. ಟ್ರಾಕ್ಟರನ 2 ದೊಡ್ಡ ಡಿಸ್ಕಿನ ಜೊತೆಗೆ ಇದ್ದ ಟೈಯರುಗಳು 11. ಎರಡು ಇಂಚು ಸುತ್ತಳತೆಯ ಮತ್ತು 20 ಫೀಟ್ ಉದ್ದ ಇರುವ ಕಪ್ಪು ಬಣ್ಣದ 06 ಪ್ಲಾಸ್ಟಿಕ ಸ್ಪಿಲ್ಗಲರ್

ಪೈಪುಗಳನ್ನು ಹಾಜರ ಪಡಿಸಿದ ಮೇರೆಗೆ ಜಪ್ತಿ ಪಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ರೀತಿಯಾಗಿ ಓದಿ ಹೇಳಿ ಜಪ್ತಿ ಪಂಚನಾಮೆಯ ಮೇಲೆ ನನ್ನ ಹೆಬ್ಬೆಟ್ಟಿನ ಸಹಿಯನ್ನು ಮಾಡಿಸಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಜಪ್ತಿ ಪಂಚನಾಮೆಯನ್ನು ನಿಪಿ-1 ಎಂದು ಗುರುತಿಸಲಾಯಿತು. ಈಗ ವಿವರವಾಗಿ ಓದಿ ಹೇಳಿದ ನಿಪಿ-1 ರಂತೆ ಜಪ್ತಿ ಪಂಚಾಮೆಯನ್ನು ಮಾಡಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರವಾಗಿ ಶ್ರೀ ಜಿ.ಎಸ್.ಎನ್. ವಕೀಲರಿಂದಃ**

ಯಾವುದೇ ಪಾಟೀ ಸವಾಲು ಇರುವುದಿಲ್ಲ.

**ಮರುವಿಚಾರಣೆ ಃ** ಇಲ್ಲ

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

ಓ. ಹೇ. ಕೇ. ಸರಿ ಇದೆ.

ಹೆಚ್ಚುವರಿ ಜೆಎಂಎಫ್‌ಸಿ ನ್ಯಾಯಾಧೀಶರು
ಯಾದಗಿರಿ